Regd No. M 1299 ॥ ಸತ್ಯಾನ್ನಾ ಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವದು ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 8 ನೆ ಏಪ್ರಿಲ 1936 [ಸಂಚಿಕೆ 30

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವ್ದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತಿದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್--ಟರ್ (ದಂತ ತಕ್ಕುಳ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ಪರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಲ್ಲ. ನೆಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವ್ದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್ ಮಳವಳ್ಳಿ ಏಜೆಂಟರು: ಆಡ್ರೆಸ್

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ಮಿ| ಜಿ. ಎಸ್. ವೆಂಕಟರಾಮ್ ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ

Manufg Chemists Druggists & Physician ೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE QUILON BANK

(Incorporated in Travancore, 1919)

Member -- Reserve Bank of India

Mysore Branch

Change of Address

We have pleasure in announcing to the public that we will be shifting the Office to a more spacious Building No. 795 Mysore Bank Road, (near Gandhi Square **from 14 th April 1936**

Mysore
31--3--36

K. V. Narayanan Nair
Agent

shanmukhavilas Coffee Club

Jaganmohan Palace Road
M Y S O R E

— for —

EXCELLENT TIFFIN, & COFFEE

Wanted

Agents with Pay and Allowances to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings
Chamarajpuram, Mysore.

ನಗರವಾರ್ತೆ

ಗುಣಾಂಬಾ ಗರ್ಭಿಣಿ ಶಿಶುಸಂರಕ್ಷಣಾ ಸಂಸ್ಥೆ

(ನಮ್ಮ ವಿಶೇಷ ಸುದ್ದಿಗಾರರಿಂದ)

ಈ ಮೇಲ್ಕಂಡ ಸಂಸ್ಥೆಯ ಮತ್ತು ರೆಡ್‌ಕ್ರಾಸ್ ಸಂಘದ ಮೈಸೂರು ಪಟ್ಟಣದ ಸಭೆಯ ವಾರ್ಷಿಕ ಸಾರ್ವಜನಿಕ ಸಭೆಯು ತಾ|| ೩-೪-೩೬ ರ ಸಾಯಂಕಾಲ ವಾಣೀವಿಳಾಸ ಗರ್ಭಿಣಿ ಶಿಶುಸಂರಕ್ಷಣಾ ಕೇಂದ್ರಸ್ಥಾನದಲ್ಲಿ ನೆರವಿತ್ತು.

ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಸರ್ ಚಾರಲ್ಸ್ ಟಾಡ್‌ಹಂಟರವರು ಅಧ್ಯಕ್ಷ ಪದವಿಯನ್ನು ಅಲಂಕರಿಸಿ ಕೆಳಗಿನ ಕಾರ್ಯಕಲಾಪಗಳನ್ನು ನೆರವೇರಿಸಿದರು.

೧. ಒಟ್ಟುಗೂಡಿದ್ದ, ಗುಣಾಂಬಾ ಸಂಸ್ಥೆ ಮತ್ತು ಇಂಡಿಯನ್ ರೆಡ್‌ಕ್ರಾಸ್ ಸಂಘ, ಮೈಸೂರು ಪಟ್ಟಣದ ಉಪಶಾಖೆಯ ವಾರ್ಷಿಕ ವರದಿಯು ಓದಿ ಒಪ್ಪಲಾಯಿತು.

೨. ಮೇಲ್ಕಂಡ ಸಂಸ್ಥೆ ಮತ್ತು ಉಪಶಾಖೆಯ ಆಯವ್ಯಯದ ವರದಿಯು ಪರಿಶೀಲಿಸಿ ಒಪ್ಪಲಾಯಿತು.

೩. ಗೌರವ ಕಾರ್ಯದರ್ಶಿ ರಾವ್‌ಸಾಹೇಬ್ ಎಂ. ರಾಮಸ್ವಾಮಯ್ಯನವರ ಸಲಹೆಯ ಪ್ರಕಾರ ಸಾರ್ವಕಾಲ ಕೆಲಸ ಮಾಡುವ ಗುಮಾಸ್ತೆಯರನ್ನು ನೇಮಕ ಮಾಡಲಾಯಿತು.

೪. ಮೇಲ್ಕಂಡ ಸಂಸ್ಥೆ ಮತ್ತು ಉಪಶಾಖೆಯ ಮುಂದಿನ ಪುರೋಭಿವೃದ್ಧಿಗೆ ಅವಶ್ಯಕವಾದ ಸಲಹೆಗಳು ವಿಚಾರ ಮಾಡಲ್ಪಟ್ಟವು.

೫. ಕೈವಸ್ಕಳಿಗೆ ಮನೆಹಾಲು ಕೊಡುವದು ನಿಲ್ಲಿಸಕೂಡದೆಂದೂ, ಈ ವಿಚಾರದಲ್ಲಿ ಒಬ್ಬ ಹೆಂಗಸು ವೈದ್ಯರ ರುಜುನಿಸಿ ಬರುವ ಆರ್ಜಿಗಳ ಪ್ರಕಾರ ಹೊಸ ಕೈವಸ್ಕಳನ್ನು ಸೇರಿಸಬೇಕೆಂದು ನಿರ್ಣಯವಾಯಿತು.

೬. ಕ್ಷಯಿಸುತ್ತಿರುವ ಮಕ್ಕಳ ಆಹಾರದ ವಿಚಾರದಲ್ಲಿ ಸಲಹೆಮತ್ತು ಅನ್ನಪಾನಗಳನ್ನು ಗೊತ್ತಾದ ಕೆಲವು ಮಕ್ಕಳಿಗೆ ವರ್ಧಗಿಸಿ ಕೊಡಬೇಕೆಂದೂ ನಿರ್ಣಯವಾಯಿತು.

೭. ಹೆಂಗಸು ಸಬ್ ಆಸಿಸ್ಟೆಂಟ್ ಸರ್ಜನ್ನುಗಳ ಸಂಬಳ ಮಾಸಿಕೆಯಾನ ೬೦ ರೂಪಾಯಿಗಳಂತೆ ನಿಯಾಮಕ ಮಾಡಬೇಕೆಂದೂ ಮತ್ತು ಡಾ|| ರಾಮಣ್ಣನವರಿಗೆ ೧೦ ರೂಪಾಯಿ ಸಂಬಳವನ್ನು ಹೆಚ್ಚಿಸಿ ಬೇಕೆಂದೂ ಇವರ ಕ್ಲಿನಿಕ್ಸ್ ಮುಂತಾದ ಕೆಲಸಗಳನ್ನು ಕೈಕೊಳ್ಳಬೇಕೆಂದು ನಿಶ್ಚಯವಾಯಿತು.

೮. ಒಬ್ಬ ಹೆಂಗಸು ಉಪಚಾರಕರನ್ನು ಹೆಚ್ಚಾಗಿ ನೇಮಿಸಲ್ಪಟ್ಟಿತು.

೯. ಶಿಶುಸಂರಕ್ಷಣಾ ಪಾಠಶಾಲೆಗಳಿಗೆ ೫ ಜನ ಉಪಾಧ್ಯಾಯರು ನೇಮಿಸಲ್ಪಟ್ಟರು.

೧೦ ಕಾಂತರಾಜೆ ಅರಸಿನವರ ಚೌಕದಲ್ಲಿ ೮ ಸಾವಿರ ರೂಪಾಯಿಗಳಿಗೆ ಹೆಚ್ಚಿಲ್ಲದೆ ಮೇಲ್ಕಂಡ ಸಂಸ್ಥೆ ಮತ್ತು ಪಾಠಶಾಲೆಗೆ ಒಂದು ಕಟ್ಟಡ ಕಟ್ಟಬೇಕೆಂದೂ ಮತ್ತು ನಂಜರಾಜ ಬಹದ್ದೂರ್ ಛತ್ರದ ಹಿಂಭಾಗದಲ್ಲಿ ಸಹ ೧ ಸಾವಿರ ರೂಪಾಯಿ ಖರ್ಚಿನ ಮೇಲೆ ಒಂದು ಆಟಪಾಟಕ್ಕೆ ಅನುಕೂಲಿಸುವ ಪಾಠಶಾಲೆಯನ್ನು ಕಟ್ಟಬೇಕೆಂದು ನಿಶ್ಚಯವಾಯಿತು.

೧೧ ಕಟ್ಟಿಗೆ ವೀರಯ್ಯನ ದೇವಸ್ಥಾನ ವಾಣಿ ವಿಳಾಸಕೇಂದ್ರ ಸಂಸ್ಥೆಯ ಮಗ್ಗುಲಲ್ಲಿರುವದನ್ನು ೧೬೦೦ ರೂಪಾಯಿ ಕ್ರಯಕ್ಕೆ ತೆಗೆದುಕೊಂಡು ಸೇರಿಸಿಕೊಳ್ಳುವದೆಂದು ನಿಶ್ಚಯನಾಯಿತು.

೧೨. ಶ್ರೀ ಮಲ್ಲಮ್ಮ ಮತ್ತು ಸುಬ್ರಹ್ಮಣ್ಯ ಕೇಂದ್ರಗಳಲ್ಲಿ ಬಿಸಲಿಗೆ ಮರೆಸೂಡಿ ಬಂದವರು ಕೂರುವದಕ್ಕೆ ೧ ಸಾವಿರ ರೂಪಾಯಿ ಖರ್ಚಿನಲ್ಲಿ ಕಟ್ಟುವದೆಂದು ತೀರ್ಮಾನವಾಯಿತು.

೧೯೩೬ ನೇ ಇಸವಿಗೆ ಕಾರ್ಯಕ್ರಮ ನಡಿಸುವ ಬಗ್ಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೆ ಮುಂತಾದವರು ನೇಮಿಸಲ್ಪಟ್ಟರು.

ವೈಸೂರು (ಪಿಂಜರಾಪೋಲ್) ಪಶುಸಾಲನಾಲಯ

ತಾ|| ೪ ರ ಸಾಯಂಕಾಲ ಶ್ರೀ ವಾಣೀವಿಳಾಸ ಕೇಂದ್ರಸ್ಥಾನದಲ್ಲಿ ಸರ್ ಚಾರ್ಲ್ಸ್ ಟಾಡ್‌ಹಂಟರ್ ರವರ ಅಧ್ಯಕ್ಷತೆಯಲ್ಲಿ ಪಶುಸಾಲನಾಲಯದ ವಾರ್ಷಿಕ ಸಾರ್ವಜನಿಕ ಸಭೆಯು ನೆರವೇರಿತು. ರಾವ್‌ಸಾಹೇಬ್ ರಾಮಸ್ವಾಮಯ್ಯನವರು (~~ಕಾರ್ಯದರ್ಶಿ~~) ವಾರ್ಷಿಕ ವರದಿಯನ್ನು ಓದಿದರು. ಲೆಖ್ಖಾಚಾರದ ವರದಿಯು ಆಯಿತು. ಅನೇಕ ಮಲ್ಲಾನಿ ಸಾಹುಕಾರರು ಸದಸ್ಯರಾಗಿ ಸೇರಿದರು. ಈ ಸಂಘದವರು ಪಶುವೈದ್ಯಶಾಲೆಗೆ ಬರುವ ಜಾನುವಾರುಗಳಿಗೆ ಔಷಧಿ ಉಪಚಾರದ ಬಗ್ಗೆ ನಿಲ್ಲುವದಕ್ಕೆ ನೆರಳನ್ನು ಮೂಡುವದಕ್ಕೆ ಕಟ್ಟಡ ಕಟ್ಟಿಸುವದಾಗಿಯೂ ಮತ್ತು ಇತರ ಸೌಕರ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಿಶ್ಚಯವಾಯಿತು. 1936ರ ಆಡಳಿತಕ್ಕೆ ಅಧಿಕಾರಿಗಳು ನಿಯಮಿಸಲ್ಪಟ್ಟರು..

ನಲ್ಲೀನೀರು

ರಾಜಧಾನಿಯಲ್ಲಿ ಜನನಿಬಿಡಿತವಾದ ಚಾಮರಾಜ ಮೊಹಲ್ಲಾ, ಕೃಷ್ಣಮೂರ್ತಿಪುರ ಮೊಹಲ್ಲಾ, ಚಾಮುಂಡಿಬಡಾವಣೆ, ಆದಿಕರ್ನಾಟಕಪುರಗಳಲ್ಲಿ ಕುಡಿಯುವದಕ್ಕೆ ನಲ್ಲಿಯಲ್ಲಿ ಸಾಧಾರಣ ನೀರು ಇರುವದಿಲ್ಲ. ಈ ಬೇಸಿಗೇಲಿ ಬೆಳಿಗ್ಗೆ ೯ ಗಂಟೆಗೆ ನೀರು ನಿಲ್ಲಿಸಲ್ಪಡುತ್ತದೆ. ಮೂಗ-ಪ್ರಾಣಿಗಳಿಗೂ ಜನಗಳಿಗೂ ಬಹಳ ಕಷ್ಟ. ಮತ್ತು ಸಾಯಂಕಾಲ ೪ ಗಂಟೆತನಕ ನೀರು ಕೊಟ್ಟಿರುತ್ತಾರೆ, ಇದು ತಿಳಿದ ವಿಚಾರ. ನೀರಿನ ಕಂದಾಯ ಮಾತ್ರ ದೀಪದ ಇಲಾಖೆಯ ಹಾಗೆ ಮುಂಗಡ ವಸೂಲು ಮಾಡುವ ಪದ್ಧತಿಯನ್ನು ಮುನಿಸಿಪಾಲಟಿಯವರು ತೀವ್ರವಾಗಿ ನಡಿಸುತ್ತಿದ್ದಾರೆ. ಕಂದಾಯ ಕಟ್ಟದಿದ್ದರೆ ನೀರು ತಡೆದುಬಿಡುತ್ತಾರೆ. ಉಸರಾಡುವುದಕ್ಕೆ ಘಾಳಿ ಜೀವಾಧಾರಣೆಗೆ ನೀರು ಅತಿಮುಖ್ಯ. ಲಕ್ಷ್ಮೀಪುರ ಮುಂತಾದ ಇತರ ಕಡೆಗಳಲ್ಲಿ ಸರ್ವ ಕಾಲದಲ್ಲಿಯೂ ನೀರು ಇರುತ್ತೆ. ನೀರಿನ ಕಂದಾಯವನ್ನು ವಸೂಲ್ಮಾಡುವ ಪದ್ಧತಿಯನ್ನು ಸರಿಪಡಿಸುವದು ಅವಶ್ಯಕ. ಇವರುಗಳಿಗೆ ನೀರು ನಿಲ್ಲಿಸಬಾರದು. ಮನೆ ಕಂದಾಯದ ರೀತಿ ವಸೂಲ್ಮಾಡಬೇಕು. ಪುರಸಭೆಯ ರೇಟ್‌ಪೇಯರುಗಳು, ಕಾನ್ಸಿಲರುಗಳು ಈ ವಿಚಾರದಲ್ಲಿ ಕೈಹಚ್ಚಿ ಪ್ರಜಾಹಿತವನ್ನು ಬಯಸುತ್ತಾರೆಯೆ ನೋಡಬೇಕು.

ನಮ್ಮ ದೇಶದಲ್ಲಿ ಲಕ್ಷಾಂತರ ಸ್ತ್ರೀಯರು ಹೃದಯರೋಗಕ್ಕೆ ತುತ್ತಾಗುತ್ತಿದ್ದಾರೆ!

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಒಂದು ದೇಶದ ಏಳಿಗೆಗೆ ಆ ದೇಶದ ಸ್ತ್ರೀಯರ ದೇಹಾರೋಗ್ಯವೇ ಅಡಿಗಲ್ಲು ಎಂಬುದಕ್ಕೆ ಚರಿತ್ರೆಯಲ್ಲಿ ಬಹು ಸ್ಪಷ್ಟವಾದ ನಿದರ್ಶನವು ಇದೆ. ಹಿಂದೆ ರೋಮ್ ಚಕ್ರಾಧಿಪತ್ಯದಲ್ಲಿ ದೇಶದ ಪ್ರತಿಯೊಬ್ಬರೂ ದೇಹಧಾರಢ್ಯವನ್ನು, ಹೆಚ್ಚಿಸಿಕೊಳ್ಳಬೇಕೆಂದು ಒತ್ತಾಯಪಡಿಸುತ್ತಿದ್ದರು. ಯಾವ ಮಗುವು ಹುಟ್ಟಿದರೂ, ಮೂರು ದಿವಸ ಆದನ್ನು ಊರಿನಾಚೆ ಬೆಟ್ಟಗುಡ್ಡಗಳಲ್ಲಿ ಬಿಟ್ಟು ಬರುತ್ತಿದ್ದರು. ಮೂರು ದಿವಸಗಳಾದ ಮೇಲೆ ಆ ಮಗುವು ಬದುಕಿದ್ದರೆ, ಆದನ್ನು ದೇಹಧಾರಢ್ಯವುಳ್ಳದೆಂದು ತಿಳಿದು ಅದನ್ನ ಪೋಷಿಸುತ್ತಿದ್ದರು. ಇದಲ್ಲದೆ, ಬಲಹೀನರಿಗೆ ಯಾವ ಪ್ರೋತ್ಸಾಹವೂ ದೊರೆಯುತ್ತಿರಲಿಲ್ಲ. ದೇಹಬಲವನ್ನು ಪ್ರದರ್ಶಿಸುವ ಆಟಪಾಟಗಳು ಆ ರೋಮ್ ಜನಾಂಗದ ಮುಖ್ಯ ವಿನೋದಗಳಾಗಿದ್ದವು. ಆದರಿಂದಲೇ ಆ ಜನರ ಚಿತ್ರಗಳಲ್ಲಿ, ಒಳ್ಳೇ ಕಾಯವುಪ್ಪಿಯುಳ್ಳವರನ್ನೇ ಚಿತ್ರಿಸಿರುವರು. ರೋಮ್ ದೇಶದ ಸ್ತ್ರೀಯರೂ ಬಹು ಸ್ಫುರದ್ರೂಪಿಯರೂ, ಧೃಡಕ್ರಾಯರಾದವರೂ ಆಗಿದ್ದರು. ಆಟಪಾಟಗಳಲ್ಲಿ ಭಾಗವಹಿಸಿ, ವಿಶೇಷವಾಗಿ ಸೂರ್ಯನ ಬೆಳಕಿನಲ್ಲಿ ವೈದಾನಗಳಲ್ಲಿ ಕಾಲಕಳೆಯುತ್ತಿದ್ದರು. ನಮ್ಮ ದೇಶದ ಸ್ತ್ರೀಯರ ಈಗಿನ ಆರೋಗ್ಯಸ್ಥಿತಿಯು ಬಹು ಅಸಮರ್ಪಕವಾಗಿಯೂ, ಮುಂದಿನ ಜನಾಂಗದ ಏಳಿಗೆಗೆ ಕಂದಕವಾಗಿಯೂ ಇದೆ. ಇದನ್ನು ಕೂಡಲೇ ಸರಿಪಡಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತೆ

ಗುಜರಾತ್ತಿನಲ್ಲಿ ವಿವಿಧ ಜಾತಿಗಳು

ಗುಜರಾತ್ಪ್ರಾಂತ್ಯದಲ್ಲಿ ಅನೇಕ ಅಂತಸ್ತುಗಳೂ ಜಾತಿಗಳೂ ಇವೆ. ಆಫೀಸುಗಳಲ್ಲಿ, ಅವಂದ್‌ಕ್ಲಾರ್ಕ್, ಎಸ್ಟಾಬ್ಲಿಷ್‌ಮೆಂಟ್‌ಕ್ಲಾರ್ಕ್ ಪರ್ಸನಲ್‌ಕ್ಲಾರ್ಕ್ ಮುಂದಾದ ನಾನಾ ತರಹ ಇರುತ್ತಾರೆ ಇದರಲ್ಲೆಲ್ಲಾ ಎಸ್ಟಾಬ್ಲಿಷ್‌ಮೆಂಟ್ ಕ್ಲಾರ್ಕ್‌ಗಳೆಂದರೆ ದರ್ಪಜಾಸ್ತಿ ಈ ಜಾತಿಯವರು, ತಾವೇ ಹೆಚ್ಚೆಂಬ ಹೆಮ್ಮೆಯಿಂದ ಮೆರೆಯುತ್ತಾರೆ. ಬಾಕಿ ಎಲ್ಲಾ ಜಾತಿಯ ಕ್ಲಾರ್ಕ್‌ಗಳ ಸಂಬಳ, ಬಡ್ತಿ ಮುಂತಾದ ವಿಷಯಗಳೆಲ್ಲವೂ ಇವರ ಕೈಲಿವೆ ಸನಿಯವರಿರು, ತಮ್ಮ 'ತರಫ್' ನವರಿಗೆ ಅನುಕೂಲ ಮಾಡಿಕೊಡ್ಬವುದುಂಟು. ಇಂಥವರನ್ನು ಒಂದೇ ಆಫೀಸಿನಲ್ಲಿ ಒಂದೇ ಕಡೆ ಬಹುಕಾಲ ಇಟ್ಟರೆ ಆ ಆಫೀಸಿನ, ಸ್ಥಿತಿ ದೇವರಿಗೇ ಪ್ರೀತಿ! ದೊಡ್ಡ ಡಿಸ್ಪ್ರಿಕ್ಟುಗಳಲ್ಲಂತೂ ಇವರ ಹಾವಳಿ ಹೇಳತೀರದು. ಇವರನ್ನು ಬೇಗ ಬೇಗನೆ ವರ್ಗಾಯಿಸುವುದರಿಂದ ಇವರ ಹಾವಳಿಯನ್ನು ಕಡಿವೆ ಮಾಡಿದಂತೆ ಆಗುತ್ತದೆ!

ನಾಯಿಗಳ ಸೈನ್ಯವು ಪುರಭವನಕ್ಕೆ ನುಗ್ಗಿತು! ತಮ್ಮ ಮೇಲೆ ಹಾಕಿದ ತೆರಿಗೆಯನ್ನು ಪ್ರತಿಭಟಿಸುವುದಕ್ಕೆ! ತೆರಿಗೆಯು ರದ್ದಾಯಿತು!

ಅಮೇರಿಕಾ ದೇಶದ ಒಂದು ಊರಿನಲ್ಲಿ ಪೌರ ಸಭೆಯವರು ನಾಯಿಗಳ ಮೇಲೆ ಹೊಸ ತೆರಿಗೆ ಹಾಕಿದರು ಸರಿ ತಾವರು, ನಾಯಿಗಳನ್ನಿಟ್ಟಿದ್ದವರೆಲ್ಲರೂ ತಮ್ಮ ಸಹಸ್ರಾರು ನಾಯಿಗಳನ್ನು ತಂದು ಪುರಭವನದ ಮೇಲೆ 'ಜೂ' ಬಿಟ್ಟರು. ಒಳಗೆ ಮೀಟಿಂಗ್ ನಡೆಯುತ್ತಿತ್ತು. ನಾಯಿಗಳು ಬೊಗಳುತ್ತಾ ನುಗ್ಗಿ ದೊಡನೆ, ಕೋಲಾಹಲವೆದ್ದಿತು. ನಾಯಿಗಳ ತೆರಿಗೆಯು ರದ್ದಾಯಿತು!

ಎಂಟನೇ ಎಡ್ವರ್ಡ್‌ರವರಿಗೆ ಲಾರ್ಡ್ ಲಿನಲಿಥಗೊರವರ ಮಗಳನ್ನು ವಧುವನ್ನಾಗಿ ಆರಿಸಬಹುದೆಂಬ ವರ್ತಮಾನವಿದೆ.

ಬಡತನದ ಬಳಲಿಕೆಯನ್ನು ತಾಳಲಾರದೆ ರಾವಳಪಿಂಡಿಯ ಹತ್ತರ ತಂದೆ, ೩ ಹೆಣ್ಣುಮಕ್ಕಳು ನಾಲ್ವರು ರೇಲ್ವೆಗಾಡಿಯ ದಾರಿಯಲ್ಲಿ ಬಿದ್ದು ಮರಣ ಹೊಂದಿರುವುದಾಗಿ ತಿಳಿಯಬಂದಿದೆ.

ಲಾಯರಿಗೆ ಕೊಟ್ಟರು ಕೈಯಿ! ಫೊರ್ಜರಿ ಕೇಸಿನಲ್ಲಿ!!

ಬ್ರೆಜಿಲ್ ದೇಶದ ಸಾವಾಲೋ ಎಂಬ ಊರಿನಲ್ಲಿ ಫೊರ್ಜರಿ ಮಾಡಿದರೆಂದು ಇಬ್ಬರನ್ನು ಹಿಡಿದು ಮೊಖದ್ದಮೆ ಮಾಡಿದರು. ಇವರನ್ನು ನೋಡಿ ಮರುಕಗೊಂಡು ಒಬ್ಬ ಪರೋಪಕಾರಿ ಲಾಯರು ಇವರ ಕಡೆ ವಾದಿಸಿ ಅವರನ್ನು ಬಿಡಿಸಿದನು. ಅವರು ತಮ್ಮ ಕೃತಜ್ಞತೆಯನ್ನು ತೋರಿಸಲು, ಐನೂರು ಡಾಲರ್ ನೋಟುಗಳ ಕಟ್ಟನ್ನ ಲಾಯರಿಗೆ 'ಬಹುಮಾನ' ಕೊಟ್ಟರು. ಅವನ್ನು ಅಂಗಡಿಗೆ ಮುರಿಸಲು ತೆಗೆದು ಕೊಂಡು ಹೋದಾಗ 'ಫೊರ್ಜ್' ಮಾಡಿದ ನೋಟುಗಳೆಂದು ತಿಳಿಯಿತು. 'ಬಹುಮಾನ' ಕೊಟ್ಟವರು ಪರಾರಿಯಾದರು. ಲಾಯರ್ ಕೈಕಚ್ಚಿಕೊಂಡು, ಅವರನ್ನು ಪುನಃ ಹಿಡಿಯಲು ತಾನೂ ಪ್ರಯತ್ನಿಸುತ್ತಿದ್ದಾನೆ!

ಕೇರಳ ಪ್ರಾಂತಿಕ ಹರಿಜನ ಸೇವಕ ಸಂಘದ ದೇವಾಲಯ ಪ್ರವೇಶ ಸಮಿತಿಯವರು ಆ ಪ್ರಾಂತದಲ್ಲಿ ದೇವಾಲಯ ಪ್ರವೇಶ ಜಾಗ್ರತಿಯನ್ನು ಏಪ್ರೆಲ್ ತಾ॥ ೫ ರಿಂದ ೭ರ ಮಾಡಬೇಕೆಂದು ಗೊತ್ತು ಮಾಡಿದ್ದಾರೆ

ಆಸ್ಟ್ರೇಲಿಯಾ, ಹಂಗೇರಿ, ಇಟಲಿ ರಾಜ್ಯಗಳ ಪ್ರತಿನಿಧಿಗಳು ಕಳೆದವಾರ ರೋಂ ನಗರದಲ್ಲಿ ಕೂಡಿತು ಆಲೋಚಿಸಿ ಹಲವು ವರ್ಷಗಳವರೆಗೆ ನಡೆದು ಬರುವಂತೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ ಎಲ್ಲಾ ಪ್ರಾಮುಖ್ಯ ವಿಷಯಗಳನ್ನೂ ಮೂರು ರಾಜ್ಯದವರೂ ಸೇರಿ ನಿರ್ಣಯ ಮಾಡಿ ಅದರಂತೆ ವರ್ತಿಸಬೇಕೆಂದೂ, ಸಮಯದಲ್ಲಿ ಒಬ್ಬರಿಗೊಬ್ಬರು ಸೈನ್ಯ ಸಹಾಯ ಮಾಡುವುದೇ ಆಗಲೀ, ಆರ್ಥಿಕ ರಿಯಾಯಿತಿಯ ವಿಷಯವಾಗಿಯಾಗಲೀ ಯಾವ ತೀರ್ಮಾನವನ್ನೂ ಮಾಡಿಲ್ಲವೆಂದು ಹೇಳಲಾಗಿದೆ.

ಈಗ ೨ ವಾರಗಳ ಹಿಂದೆ ಸಾಂಗಲಿಯಲ್ಲಿ ನಡೆಯುವ ಯಜ್ಞವು ಜನಶೆಯ ಪಿಸಂತಿಯು ವೇರೆಗೆ ನಿಲ್ಲಿಸಲ್ಪಟ್ಟಿದೆಯೆಂದು ಸುದ್ದಿ ಪ್ರಕಟವಾಗಿದ್ದಿತು. ಆದರೆ ಈಗ ತಿಳಿದುಬಂದಿರುವ ಸುದ್ದಿಯ ಮೇರೆಗೆ ಆ ಯಜ್ಞದ ಮುಖ್ಯ ಕರ್ತೃಗಳಾದ ನಾತುಶಾಸ್ತ್ರಿಗಳು ತಮ್ಮ ಸಂಕಲ್ಪವನ್ನು ಬಿಟ್ಟಿಲ್ಲವೆಂದೂ ಈ ಯಜ್ಞವು ಜಾಗ್ರತೆಯಾಗಿಯೇ ಆಗುವುದೆಂದೂ ತಿಳಿದುಬಂದಿದೆ. ಯಜ್ಞದ ಸಿದ್ಧತೆಯು ಜಾಗ್ರತೆಯಿಂದ ನಡೆಯುತ್ತಿದೆ. ನಾಶಿಕ, ಪುಣೆ, ವಾಯಿ, ರಾಜಪೂರಗಳಿಂದ ದೊಡ್ಡ ದೊಡ್ಡ ಪಂಡಿತರೂ ಶಾಸ್ತ್ರಿಗಳು ಸಾಂಗಲಿಗೆ ಬರುತ್ತಿರುವರಂತೆ ಶ್ರೀ ಖಾಡಿಲಕರರ ವಾಡೆಯಲ್ಲಿ ಯಜ್ಞವಂಟಪವು ಹಾಕಲ್ಪಟ್ಟು ಅಲ್ಲಿಯೇ ಯಜ್ಞವು ಜರುಗುವದೆಂದು ತಿಳಿಯಬರುತ್ತದೆ.

ಸಿಂಧು ದೇಶದ ಕೆಲವು ಸಂಸಾರದವರು ರೈಲ್ವೆ ಗಾಡಿಗಳಲ್ಲೇ ಬಾಲ್ಯವಿವಾಹಗಳನ್ನು ನಡೆಸುತ್ತಿರುವರಂತೆ ಸೆಧಾಂಜೆಗಾರರಿಂದ ತಪ್ಪಿಸಿಕೊಳ್ಳಲು ಅವರು ಈರೀತಿಮಾಡುತ್ತಿರುವರು.

ಸಾತಾರಾ ಮುನಸಿಪಾಲಿಟಿಯವರು ವಿಲಾಯತಿಯಲ್ಲಿಯ ಭಾರತ ಮಂತ್ರಿಗಳ ಮೇಲೆ ಒಂದು ದಾವ ಮಾಡಿದ್ದರು ತಮಗೆ ಸರಕಾರದಿಂದ ಶಿಕ್ಷಣಕ್ಕಾಗಿ ಒರತಕ್ಕ ಸಹಾಯ ದ್ರವ್ಯ ಮತ್ತು ಅದರಲ್ಲಿ ಳಿಗಿಷ್ಟ ರೂಪಾಯಿ ಬರತಕ್ಕ ಹಣದ ಬಗ್ಗೆ ಸತಾರ ಮುನ್ಸೀಫರ ಮುಂದೆ ವಿಚಾರಣೆ ನಡೆಯಿತು ಒಕ್ಕಾಯದ ಮತ್ತು ಮಾಫಿಯ ವ್ಯಾಥಮಿಕ ಶಿಕ್ಷಣಕ್ಕೆ ಕೊಡತಕ್ಕ ಸಹಾಯ ದ್ರವ್ಯದೊಳಗೆ ಕಡಿಮೆ ಮಾಡಲು ಸರಕಾರದವರಿಗೆ ಅಧಿಕಾರವಿಲ್ಲವೆಂದೂ ಕೋರ್ಟು ತೀರ್ಪು ಕೊಟ್ಟಿರುವದೆಂದು ಪ್ರಕಟವಾಗಿದೆ.

ಒಬ್ಬ ಹಣ್ಣಿನ ವ್ಯಾಪಾರಿಯು ಒಂದು ಮೂಕನಾದ, ಡಾಕ್ಟರರು ಎಷ್ಟೇ ಪ್ರಯತ್ನಪಟ್ಟರೂ ಮಾತಾಡುವುದಕ್ಕೆ ಬರುತ್ತಿರಲಿಲ್ಲ ಕೊನೆಗೆ ಒಬ್ಬ ಡಾಕ್ಟರರು ಆ ಮೂಕನ ಕಿರುನಾಲಿಗೆಯನ್ನು ತೆಗೆದು ಒಂದು ಕೃತ್ರಿಮ ಕಿರುನಾಲಿಗೆಯನ್ನಿಟ್ಟರು, ಕೂಡಲೆ ಆ ಮೂಕನು ಮಾತಾಡುತ್ತಿದ್ದನು

ಜಪಾನ್ ಮತ್ತು ಜರ್ಮನಿ ದೇಶಗಳೆರಡೂ ಸೋವಿಯಟ್ ರಷ್ಯಾದ ಶತ್ರುಗಳೆಂದು, ಜಪಾನಿನ ಒಂದು ಪತ್ರಿಕೆಯು ಘೋಷಿಸಿದೆ.

ಒಂದು ಕುಂಬಳ ಗಿಡದ ಕೊಂಬೆಯು ಹೇಗೆ ಸರ್ಪವಾಯಿತೆಂಬ ವಿಚಿತ್ರವಾದ ಕಥೆಯು ಸಿಲ್‌ಹಟ್‌ನಲ್ಲಿ ನಡೆಯಿತು ಆ ಕೊಂಬೆಯು, ಹಾವಿಗೆ ಸಮಾನವಾದ ಬಣ್ಣ, ಜಕ್ಕೆ ಮತ್ತು ಮೃದುತ್ವವನ್ನು ಹೊಂದಿತು; ಇದನ್ನು ನೋಡಲಿಕ್ಕೆ ಅನೇಕ ಜನರು ಹೋಗುತ್ತಿದ್ದಾರೆ

ಒಬ್ಬ ಸುಂದರ ತರುಣಿಯು ತನಗೆ ಒಬ್ಬ ಪತಿಯು ಬೇಕಾಗಿರುವುದರಿಂದ ಆರಿಸಿ ಕೊಡಬೇಕೆಂದು ಆ ಊರಿನ ಮೇಯರಿಗೆ ತಿಳಿಸಿದಳು. ಅವರು ಜಾಹಿರ್ ಮಾಡಲು ೩೦೦ ಅರ್ಜಿಗಳು ಬಂದಿವೆ, ೨೫ ಜನರನ್ನು ಮೇಯರು ಆರಿಸಿದ್ದಾರೆ; ಇವರೊಳ್ಳೊಬ್ಬನನ್ನು ತರುಣಿಯು ವರಿಸುವಳು



ಸತ್ಯವಾದಿ

ಶಿಶುಗಳ ಮರಣ ಸಂಖ್ಯೆ

ಹಿಂದೂಸ್ಥಾನದಲ್ಲಿ ಮಿಕ್ಕ ದೇಶಗಳಿಗಿಂತ ಶಿಶುಗಳ ಮರಣ ಸಂಖ್ಯೆಯು ಅಧಿಕವೆಂದೂ, ಇದಕ್ಕೆ ಕಾರಣವು ಹಿಂದೂ ದೇಶೀಯರ ಬಾಲ್ಯವಿವಾಹವೇ ಆದಿ ದುರಾಚಾರಗಳೆಂದೂ ನಾಗರಿಕ ಜನಾಂಗದವರೂ, ಹೂಣವಿದ್ಯಾಭ್ಯಾಸದ ಪ್ರಭೆಯಿಂದ ತನ್ಮ ಪೂರ್ವ ಸಂಸ್ಕೃತಿಯು ವಾಸನೆಯೇ ಇಲ್ಲದವರೂ ನುಡಿಯುವರು. ಆಯಾ ದೇಶದವರಿಗೆ ಆ ದೇಶದ ಆಚಾರವೇ ಮುಖ್ಯವು; ಆಯಾ ದೇಶದಲ್ಲಿರುವವರು ಆ ದೇಶದ ಪೂರ್ವಾಚಾರವನ್ನವಲಂಬಿಸಿ ನಡೆಯತಕ್ಕ ದ್ದೆಂಬ ವಿಷಯವನ್ನು ಸಂಪೂರ್ಣವಾಗಿ ಇವರು ಮರೆತು ಹೋಗಿರುವರು. ಪ್ರತಿ ದೇಶದಲ್ಲಿಯೂ ಮಾನವನಿಗಿರುವ ಸೌಕರ್ಯಗಳು, ವಾಯುಗುಣ. ಭೂಮಿಯ ಸ್ಥಿತಿ ಮೊದಲಾದವುಗಳನ್ನು ಹಿಡಿದು ಪೂರ್ವೀಕರು ಆಯಾ ದೇಶದ ಆಚಾರವನ್ನು ನಿರ್ಧಾರಮಾಡಿ ಆಚರಣೆಯಲ್ಲಿ ಬರುವಂತೆ ಮಾಡಿರುವರು. ಇದನ್ನು ತಿಳಿಯದೆ ತಮ್ಮದೇ ಆಚಾರ, ತಾವು ಹೇಳಿದ್ದೇ ಸರಿ ಎಂದು ಹೇಳುವವರ ಸಂಖ್ಯೆಯು ಧೇಶದಲ್ಲಿ ಹೆಚ್ಚುತ್ತಿರುವದರಿಂದಲೇ ಭಾರತ ಭೂಮಿಯು ಅನೇಕ ಕಷ್ಟಸಟ್ಟಗಳಿಗೆ ಗುರಿಯಾಗುತ್ತಲಿದೆ. ನವನಾಗರಿಕರು ಅನೇಕರಿಗೆ ರಿಫಾರ್ಮರ್‌ಗಳ ನುಡಿಗಳು ಮನೋರಂಜಕವಾಗಿರಬಹುದಾದರೂ ಅವು ಕೇವಲ ಅನರ್ಥದಾಯಕಗಳೆಂಬ ವಿಷಯವು ಇಂದಿಲ್ಲದಿದ್ದರೆ ನಾಳೆಯಾದರೂ ಸ್ಪಷ್ಟವಾಗದಿರದು.

ಭಾರತದೇಶದಲ್ಲಿ ಹಿಂದಿನ ಕಾಲಕ್ಕಿಂತ ಈಚೆಗೆ ಶಿಶುಮರಣಗಳು ಹೆಚ್ಚಿರುವದಕ್ಕೆ ಕಾರಣಗಳೇನೋ ನೋಡಿರಿ—

೧. ಜನರ ಆರ್ಥಿಕ ದುಸ್ಥಿತಿ. ಒಡತನವು ಹೆಚ್ಚಿದಂತೆಲ್ಲ ಶಿಶುಗಳ ಮರಣ ಸಂಖ್ಯೆಯು ಹೆಚ್ಚುವದು ಅಂದರೆ ಯಾವ ಹೆಂಗಸರಿಗೆ ಹೊಟ್ಟೆಗೆ ಸಾಕಾದಷ್ಟು ಕೂಳು ಕೂಡ ದೊರೆಯುವದ ದುರ್ಲಭವೋ, ಯಾವು ತಮ್ಮ ಶಿಶುಗಳನ್ನು ಆಹಾರಾಭಾವದಿಂದ ಸಾಕಾದಷ್ಟು ಎದೆಯ ಹಾಲನ್ನು ಕೂಟ್ಟು ಪೋಷಿಸಲಾರರೋ ಅಂಥವರ ಸಂಸಾರಗಳಲ್ಲಿಯೇ ಹೆಚ್ಚು ಮಕ್ಕಳು ಸಾಯುವರು. ಹಿಂದೂಸ್ಥಾನದಲ್ಲಿ ಒಬ್ಬನ ೧॥ ವರ್ಷದ ಸರಾಸರಿ ಉತ್ಪತ್ತಿಯು ಇಂಗ್ಲೆಂಡಿನಲ್ಲಿ ಒಂದು ತಿಂಗಳ ಒಬ್ಬನ ಉತ್ಪತ್ತಿಯಾಗಿರುತ್ತದೆ. ಹಿಂದೂಸ್ಥಾನದಲ್ಲಿ ತನ್ನ ಕೂಳಿಗಾಗಿ ಒಬ್ಬನು ಎಷ್ಟು ವ್ಯಯಮಾಡುವನೋ ಅದರ ೨–೩ ರಷ್ಟು ಹಣವನ್ನು ಇಂಗ್ಲೆಂಡಿನಲ್ಲಿ ಕೂಡಿಕಕ್ಕೆ ಏರ್ಪಾಮಾಡುವನು. ಸಾಲದಕ್ಕೆ ಕಳೆದ ೫೦ ವರ್ಷಗಳಿಂದ ಹಿಂದೂಸ್ಥಾನಕ್ಕೆ ಎಷ್ಟುಬಾರಿ ಬರಗಳು ಬಂದಿವೆ. ಎಷ್ಟು ಬಾರಿ ಮಹಾಮಾರಿ ಮುಂತಾದ ಉಪದ್ರವಗಳೂ ಬಂದಿವೆ? ಜನರು ಸ್ವಲ್ಪ ಚೇತರಿಸಿಕೊಳ್ಳಲು ಕೂಡ ಅವಕಾಶವಿಲ್ಲದೆ ಅತಿನೃಷ್ಟಿಯಿಂದ ಬಡವರಿಗೆ ಎಷ್ಟು ತೊಂದರೆಗಳು ಸಂಭವಿಸುತ್ತಿವೆ. ಇವುಗಳೊಂದಿಗೆ ನಾಗರಿಕ ಸಾಂಸ್ಯದಾಯಗಳು ಕೆಲವು (ಟೀ ಕುಡಿಯುವದು, ಕಾಫಿ ಕುಡಿಯುವದು ಮೊದಲಾದವು) ಜನರನ್ನು ಹೆಚ್ಚು ಆರ್ಥಿಕ ದುಸ್ಥಿತಿಯಲ್ಲಿ ತಂದು ಒಡ್ಡಿರುತ್ತವೆ

೨. ಸರಿಯಾದ ಆಹಾರ ಪದಾರ್ಥಗಳ ಅಭಾವ—ನವನಾಗರಿಕತೆಯ ಪ್ರಭಾವವು ಅನೇಕರನ್ನು ಹಣಗಳಿಸುವದರಲ್ಲಿ ಪ್ರವೀಣತೆಯನ್ನು ತೋರಿಸುವಂತೆ ಮಾಡಿದೆ ಹಾಲು, ಕುಸ್ಪ ಮೊದಲಾದ ಪದಾರ್ಥಗಳು ಬಿರಿಕೆಯಿಲ್ಲದೆ ಯೋಗ್ಯ ಬೆಲೆಗೆ ದೊರೆಯುವದು ಕಷ್ಟವಾಗಿದೆ. ಕೊಟ್ಟಿದ ಅಕ್ಕಿಗೆ ಬದಲಾಗಿ ಅತಿಹಾನಿಕರವಾದ ಮಿಲ್ಲಿನ ಅಕ್ಕಿಯೇ ಜನರಿಗೆ ಜೀವನಾಧಾರವಾಗಿ ಪರಿಣಮಿಸಿದೆ. ಗೋಧಿ, ಜೋಳ, ರಾಗಿಗಳನ್ನು ಉಪಯೋಗಿಸುವವರಿಗೂ ಕೂಡ ಮಿಲ್ಲಿಸಲ್ಲಿ ಬೀಸಲ್ಪಟ್ಟ ಹಿಟ್ಟೇ ಆಧಾರವಾಗಿದೆ ದೇಹವರ್ಧಕ ಪದಾರ್ಥಗಳಿಲ್ಲದೆ, ಹಾನಿಕರವಾದ ಗುಣಗಳಿಂದ ಕೂಡಿದ ಆಹಾರ ಪದಾರ್ಥಗಳ ಸೇವನೆಯು ಶಿಶು ಮರಣಗಳು ಹೆಚ್ಚಾಗಲು ದ್ವಿತೀಯ ಕಾರಣವು ಶಿಶು ಮರಣಕ್ಕೆ ಈ ಆಹಾರ ಪದಾರ್ಥಗಳ ಅಶುದ್ಧತೆಗೂ ಸಂಬಂಧನೇನೆಂದಲ್ಲಿ—ಈ ಆಹಾರ ಪದಾರ್ಥಗಳನ್ನೇ ತಾಯಿಯರು ಉಪಯೋಗಿಸುವದರಿಂದ ಅವರ ಎದೆಯ ಹಾಲು ಅರು ಉಂಡ ಆಹಾರವನ್ನನುಸರಿಸಿರುವದರಿಂದ, ಆ ದುಷ್ಟಾಹಾರ ಪದಾರ್ಥಗಳ ಪ್ರಭಾವವು ಶಿಶುಗಳನ್ನೂ ಬಿಡದೆ ಅವಲಂಬಿಸಿರುತ್ತದೆ.

೩. ಮಲೇರಿಯದ ಹಾವಳಿ—ಹಿಂದೆ ಇದರ ಮಾತೇ ಇರಲಿಲ್ಲಿ. ಈಗ ಎಲ್ಲೆಲ್ಲೂ ಅದೇ. ಕಾರಣವೇನು? ರೈಲು ಮಾರ್ಗಗಳು ಹೆಚ್ಚಿದವು ಅಣೆಕಟ್ಟುಗಳು ಹೆಚ್ಚಿದವು. ಜಲಮಾರ್ಗಗಳು ಹೆಚ್ಚಿದವು. ನೀರು ಒಂದೇ ಎಡೆಯಲ್ಲಿ ಅನೇಕಕಾಲ ನಿಂತು ಕೊಳೆಯಲವಕಾಶವಾಯಿತು. ಪರಿಣಾಮ—ವಿಷಕ್ರಿಮಿಗಳ ಉತ್ಪತ್ತಿ, ತನ್ಮೂಲಕ ಮಲೇರಿಯಾ ಜ್ವರದ ಹಾವಳಿ. ಒಂದು ಸೌಕರ್ಯಕ್ಕಾಗಿ ಮನಕೊಟ್ಟು ದೇಹಸ್ಥಿತಿಯನ್ನೇ ಹಾಳುಮಾಡಿಕೊಳ್ಳುವದು ಯೋಗ್ಯವೇ? ಮೊದಲು ಆರೋಗ್ಯಸುರಕ್ಷಿತೆ, ಆಮೇಲೆ ವಿಲಕ್ಷ ವಿಚಾರಗಳು. ರೈಲೂ ಬೇಡ, ಹೆಚ್ಚು ಭತ್ತ ಬೆಳೆಯುವುದು ಬೇಡ ಜನರು ಆರೋಗ್ಯದಿಂದ ಕೂಡಿದ್ದರೆ ಸಾಕು—ಇದು ನಮ್ಮ ಪ್ರಾಚೀನ ಭಾರತೀಯರ ಮುಖ್ಯ ಉದ್ದೇಶವು ಆದುದರಿಂದಲೇ ಕೆಲವು ಸ್ಮೃತಿಗಳಲ್ಲಿ ಹರಿಯುವ ನದಿಗೆ ಅಡ್ಡಹಾಕಬೇಡವೆಂದು ಕೂಡ ಹೇಳಿರುತ್ತದೆ. ಇದನ್ನು ಆಧುನಿಕರು ಹೇಳಿರುವದು ಸೇತುವೆಯನ್ನು ಕಟ್ಟಲು ಅಸಮರ್ಥರಾಗಿದ್ದದರಿಂದ ಅಲ್ಲ. ಮಲೇರಿಯ ಜ್ವರದ ಬಾಧೆಯಿಂದ ಜನರು ಪಾರಾಗಿರಲೆಂದು.

[ಮುಂದುವರಿಯುವುದು.

ಗುಲಿಸ್ತಾನ್

(ಕಾಪಿರೈಟ್)

ರಾಜನೀತಿ

೧೮

ಒಬ್ಬ ರಾಜಕುಮಾರನು ತಂದೆಯ ಮಹದ್ಐಶ್ವರ್ಯಕ್ಕೆ ಉತ್ತರಾಧಿಕಾರಿಯಾದನು. ಅವನು ತನ್ನ ದಾನಶೀಲತೆಯ ಕೈಗಳನ್ನು ಬೀಸಿ ಔದಾರ್ಯವನ್ನು ತೋರಿಸಿದನು. ತನ್ನ ಸೈನಿಕರಿಗೂ ಮತ್ತು ಪ್ರಜೆಗಳಿಗೂ ಅನೇಕ ಯೋಗ್ಯತಾ ಬಹುಮಾನಗಳನ್ನು ಕೊಟ್ಟನು. "ಬರೀ ಧೂಪಪಾತ್ರೆಯ ಹೊಲಿ ಹಸಿಯದಾದ ಅಗರು ಕಾಷ್ಠವನ್ನಿಟ್ಟ ಮಾತ್ರಕ್ಕೆ ಮನಸ್ಸಿಗೆ ಸುಗಂಧದ ಆಹ್ಲಾದವುಂಟಾಗುವುದಿಲ್ಲ; ಅದರ ಸುಗಂಧವಾಸನೆಯು ಪರಿವ್ಯಾಪ್ತವಾಗಬೇಕಾದರೆ ಬೆಂಕಿಯಲ್ಲಿ ಹಾಕು. ಸುಖ್ಯಾತನಾಗಬೇಕೆಂಬ ಆಶೆಯಿದ್ದರೆ ದಾನಶೀಲತೆಯನ್ನು ಆಚರಿಸು. ಬೀಜವನ್ನು ಬಿತ್ತದೆ ಬೆಳೆಕಯು ಬೂಡುವುದಿಲ್ಲ."

ಕ್ಷುದ್ರ ಮನೋಗತಿಯುಳ್ಳ ಸಭಿಕನೊಬ್ಬನಿದ್ದು "ನಿಜವಾಗಿಯೂ ಪೂರ್ವದ ರಾಜರು ಬಹುಸಮರ್ಥತೆಯಿಂದ ಸಂಪಾದಿಸಿ ತುಂಬಾ ವಿವೇಕದಿಂದ ಕೂಡಿಟ್ಟಿದ್ದರು. ಈ ತೆರವಾಗಿ ವೆಚ್ಚಮಾಡುವುದನ್ನು ನಿಲ್ಲಿಸು ಮುಂದೆ ಆಪತ್ತುಗಳೂ ಹಿಂದೆ ಶತ್ರುಗಳೂ ಹೊಂಚುಹಾಕುತ್ತಿರಬಹುದು. ಅಂತಹ ವಿಪತ್ಕಾಲವು ಈಶ್ವರನು ತರದಿರಲಿ. ಒಂದು ಕಣಜದಲ್ಲಿ ತುಂಬಿರುವ ಅಕ್ಕಿಯನ್ನು ಪ್ರಜೆಗಳಲ್ಲಿ ಹಂಚುವೆಯಾದರೆ, ಪ್ರತಿಯೊಂದು ಕುಟುಂಬದ ಯಜಮಾನನಿಗೂ ಒಂದೊಂದು ಕಾಳು ಸಿಕ್ಕಬಹುದು; ಅದಕ್ಕೆ ಬದಲಾಗಿ ಅವರಿಂದ ಅಲ್ಪಸ್ವಲ್ಪ ಹಣವನ್ನು ವಸೂಲ್ಮಾಡಿ ಪ್ರತಿನಿತ್ಯವೂ ಒಂದೊಂದು ಕೊಡಿಯ ತುಂಬ ನಿಧಿಯನ್ನು ಶೇಖರಿಸಿಡಬಾಬಾರದೇಕೆ?" ಎಂದು ಕೇಳಿದನು.

ರಾಜಪುತನು ತನ್ನ ಉನ್ನತ ಭಾವನೆಗಳಿಗೆ ವಿರುದ್ಧವಾದ ಈ ಮಾತಿಗೆ ಕಿವಿಗೊಡದೆ ವಿಮುಖನಾಗಿ, ಅತನನ್ನು ಕಠೋರವಾಗಿ ವಾಗ್ದಂಡನೆಮಾಡಿ "ನಾನು ಈ ಅನ್ಯಾಯವನ್ನು ಅನುಭವಿಸಿ, ಸರಿಯಾಗಿ ಖರ್ಚುಮಾಡಲೆಂದು ಅಪಾರ ಮಹಿಮನೂ ಸರ್ವಶಕ್ತನೂ ಆದ ಭಗವಂತನು ನನ್ನನ್ನು ಅದರ ಯಜಮಾನನನ್ನಾಗಿ ಮಾಡಿರುತ್ತಾನೆ; ಕೇವಲ ಧನವನ್ನು ಶೇಖರಿಸಿ ಅದನ್ನು ಕಾಯಲು ನನ್ನನ್ನು ಕಾವಲು ಗಾರನನ್ನಾಗಿ ಹಾಕಿರುವುದಿಲ್ಲ. ನಿಷ್ಪತ್ತು ಭಂಡಾರಗಳ ಧನವನ್ನು ಹೊಂದಿದ್ದ ಕಾರೋನನು ಸತ್ತೇ ಹೋದನು; ಸುಕೀರ್ತಿಯನ್ನು ದೊರಕಿಸಿ ಹೋದ ನಿಶಿರೋವಾನನು ಮಾತ್ರ ಇನ್ನೂ ಸತ್ತಿಲ್ಲ ಅವನು ಕೀರ್ತಿಶೇಷನಾಗಿರುವನು" ಎಂದು ಹೇಳಿದನು.

[ಮುಂದುವರಿಯುವುದು.

ಬಾಪಟ್ಲದಲ್ಲಿ ಲಕ್ಷ್ಮೀನರಸಿಂಹರಾವ್ ಎಂಬ ಗುಮಾಸ್ತೆಯು ಮನೆಯಲ್ಲಿ ನಿದ್ರೆಹೋಗುತ್ತಿದ್ದಾಗ ಆತನ ಹೆಂಡತಿಯು ಸೌದೆಯನ್ನು ಸೀಳುವ ಕೊಡಲಿಯಿಂದ ಹೊಡೆದು ಸಾಯಿಸಿದಳು. ಪೊಲೀಸಿನವರು ಕೇಸನ್ನು ತೆಗೆದುಕೊಂಡಿದ್ದಾರೆ. "ಒಲಿದರೆ ನಾರಿ, ಮುನಿದರೆ ಮಾರಿ" ಎಂಬ ನಾಣ್ನುಡಿಯು ಈ ವಿಷಯದಿಂದ ಸರಿಯಾಗಿರುವಂತೆ ಕಾಣಬರುತ್ತದೆ.

ಜೀವಶಾಸ್ತ್ರದ ಮಹತ್ವ

ಜೀವಶಾಸ್ತ್ರದ ಉಪಯೋಗ

———

(ಲೇಖಕರು—" ಕೆ. " ಯವರು.)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಲೋಕದಲ್ಲಿ ಮರಣದಿಂದ ಉಂಟಾಗುತ್ತಿರುವ ಘೋರದುಃಖವನ್ನು ಶಮನಮಾಡುವುದು ಪ್ರಸ್ತುತದಲ್ಲಿ ಜೀವನಶಾಸ್ತ್ರಜ್ಞಾನ ಒಂದೇ ಆಗಿರುತ್ತದೆ. ಜೀವಶಾಸ್ತ್ರದಿಂದ ಇನ್ನೂ ಒಂದು ಮಹತ್ಪ್ರಯೋಜನ ಉಂಟು. ಕೆಲವುವೇಳೆ ಮರಣವು ಸಮೀಪಿಸಿದಾಗ ಒಂದು ವಿಧವಾದ ಮೂರ್ಛಾವಸ್ಥೆಯು ಉಂಟಾಗುತ್ತದೆ ಈ ಮೂರ್ಛಾವಸ್ಥೆಯಲ್ಲಿ, ಹೃದ್ರಯಚಲನವು ನಿಂತುಹೋಗುತ್ತದೆ. ಶ್ವಾಸೋಛ್ವಾಸವು ನಿಲ್ಲುವುದು ಎಲ್ಲಾ ವಿಧದಲ್ಲಿಯೂ ಮನುಷ್ಯನು ಮರಣ ಹೊಂದಿದವನಂತೆಯೇ ಕಾಣುವನು. ಆದರೆ ಪ್ರಾಣವು ಹೋಗಿರುವುದಿಲ್ಲ. ಈ ಸ್ಥಿತಿಯಲ್ಲಿ ಬಹು ತೀಕ್ಷ್ಣವಾಗಿ ನರಗಳನ್ನು ಎಚ್ಚರಗೊಳಿಸಿದರೆ, ಆ ಮನುಷ್ಯನು ಪುನಃ ಬದುಕುವನು. ಈ ವಿಚಾರವು ಅನೇಕ ಸುಪ್ರಸಿದ್ಧ ಶಾಸ್ತ್ರಜ್ಞರು ಪರಿಶೋಧಿಸಿ ಸ್ಥಿರಪಡಿಸಿದುದಾಗಿದೆ. ಕೆಲವುವೇಳೆ ನಮ್ಮ ಪ್ರಿಯಬಂಧುಗಳೂ ಇದೇ ಸ್ಥಿತಿಯಲ್ಲಿರುತ್ತಾರೆ. ನಮಗೆ ವಾಸ್ತವ ವಿಚಾರವು ತಿಳಿಯದೆ ಇರುವುದರಿಂದ, ಅವರು ಸತ್ತರೆಂದೇ ಭಾವಿಸಿ ಅವರನ್ನು ಅಂತ್ಯಕರ್ಮಗಳಿಗಾಗಿ ಸ್ಮಶಾನಕ್ಕೆ ಸಾಗಿಸುತ್ತೇವೆ. ಅಲ್ಲಿ ಚಿತೆಯ ಮೇಲೆ, ಬೆಂಕಿಯ ಉಗ್ರವಾದ ಶಾಕವು ತಗಲುತ್ತಲೇ, ನರಗಳು ಎಚ್ಚರವಾಗಿ, ಪುನಃ ಜೀವವು ಬರುತ್ತದೆ ಆದರೆ ನಾವು ತಿಳಿಯದೆ, ಅವರನ್ನು ಹಾಗೆಯೇ ದಹಿಸುತ್ತೇವೆ. ಅಹಾ! ಆ ಸ್ಥಿತಿಯಲ್ಲಿ ಅವರ ಅವಸ್ಥೆಯನ್ನು ನೆನಸುವುದೇ ದುಸ್ಸಹವಾಗಿದೆ. ಯಾವ ಪ್ರಿಯಬಂಧುಗಳು ನಮ್ಮನ್ನೇ ನಂಬಿರುವರೋ, ಅವರಿಗೇ ನಾವು ಬೆಂಕಿಯಿಟ್ಟು ದಹಿಸುತ್ತೇವೆ ಜೀವಬಂದಾಗ ಬಹಳ ನಿತ್ರಾಣವಾಗಿರುತ್ತದೆ. ಮಾತನಾಡಲು ಉಸಿರು ಇರುವುದಿಲ್ಲ. ಕೂಗಿಕೊಳ್ಳುವುದಕ್ಕೆ ತ್ರಾಣವಿರುವುದಿಲ್ಲ. ಪೂರ್ಣ ಜ್ಞಾನವಿರುತ್ತದೆ. ಸುತ್ತಲೂ ನೋಡಿದರೆ, ಎಲ್ಲೆಲ್ಲಿಯೂ ಉರಿಯು ಕಾಣುತ್ತಾ ಅವರಿಗೆ ಒದಗಿಕೆರುವಾಗಲೇ ನರಕಯಾತನೆಗಿಂತಲೂ ಘೋರಯಾತನೆಯು, ಅವರ ಬಂಧುಗಳಿಂದಲೇ ಉಂಟಾಗುತ್ತದೆ. ಆ ಬಂಧುಗಳಾದರೋ ಈ ವಿಚಾರವನ್ನು ತಿಳಿಯದೆ ನಮ್ಮನೆ ಚಿತೆಯ ಹತ್ತಿರಲೇ ನಿಂತಿರುತ್ತಾರೆ ಅಜ್ಞಾನದ ಪರಿಣಾಮವು ಎಷ್ಟು ಘೋರವಾದುದು ನೋಡಿದಿರಾ! ಶವವೆಂದೇ ಗಣಿಸಲ್ಪಟ್ಟಿರುವ ಜೀವಿ ಮನುಷ್ಯನಿಗೆ, ಪುನಃ ಪ್ರಜ್ಞೆಯು ಉಂಟಾಗುವುದೆಂದು ತಿಳಿಯೋಣ. ತ್ರಾಣವೂ ಬರುವುದೆಂದು ತಿಳಿಯೋಣ. ಆಗ ಅವನು ಬೆಂಕಿಯನ್ನು ನೋಡಿ ಹಾಹಾಕಾರ ಹೊಡುತ್ತಾ ಅರಿಚಿಕೊಳ್ಳುವನು. ಸಾಧ್ಯವಾದರೆ ಎದ್ದು ಕೂರುವನು ಹತ್ತಿರಲೇ ನಿಂತಿರುವ ಅವನ ಪ್ರಿಯಬಂಧುಗಳು ಆಗ ಏನುಮಾಡುತ್ತಾರೆಂದು ತಿಳಿದಿರುವಿರಿ? ವಾಚಕರೆ! ಪ್ರೇತವು ಎದ್ದಿತೆಂಬ ಭಯದಿಂದ ಓಡಿಹೋಗುವರು, ಅಥವಾ ಇನ್ನೂ ಬಲವಾಗಿ, ಅರಿಚಿಕೊಳ್ಳುವವನ್ನು ಹಗ್ಗಗಳಿಂದ ಹಾಕಿ ಬಿಗಿಯುತ್ತಾರೆ, ಕೆಲವರು, ಶವದಂತೆ ತೋರುವ, ದೇಹವನ್ನು ಚಿತೆಯ ಮೇಲಿಟ್ಟು ದೊಡ್ಡ ದೊಡ್ಡ ಕಲ್ಲುಗಳನ್ನು ಹೇರುತ್ತಾರೆ. ಸಜೀವವಾಗಿಯೇ ಮನುಷ್ಯರನ್ನು ಸುಡುವ ಈ ಘೋರ ಪೈಶಾಚಿಕ ಕಾರ್ಯವನ್ನು ಪರಿಹರಿಸುವುದು ಹೇಗೆ? ಈ ವಿಧದಲ್ಲಿ ಅನೇಕರನ್ನು ಪ್ರತಿದಿನವೂ ಅವರ ಪ್ರಿಯ ಬಂಧುಗಳೇ ಸುಡುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದರೆ, ಮೊದಲು ಶವದಂತೆ ತೋರುವ ದೇಹದಿಂದ ಪ್ರಾಣವು ಹೋಗಿದೆಯೇ, ಸತ್ಯವನು ಸ್ಥೂಲದೇಹವನ್ನು ಬಿಟ್ಟಿರುವನೇ ಅಥವಾ ಇನ್ನೂ ಅದರಲ್ಲೇ ಇರುವನೆ ಎಂಬುದನ್ನು ತಿಳಿಯಬೇಕು. ಈ ತಿಳುವಳಿಕೆಯು ಜೀವಶಾಸ್ತ್ರದಿಂದಲೇ ಸಾಧ್ಯವು. ಮತ್ತಾವ ಮಾರ್ಗದಿಂದಲೂ ತಿಳಿಯಲು ಸಾಧ್ಯವಿಲ್ಲ. ಒಬ್ಬ ಮನುಷ್ಯನು ಸತ್ಯವನಂತೆ ಕಾಣುತ್ತಲೇ, ಜೀವಸಂಭಾವನಾ ಮಾರ್ಗಗಳು ಅನುಸರಿಸಲ್ಪಡಬೇಕು. ಆಗ ಬಹುಶಃ ಸತ್ತಿರುವವನೇ ಸಂಭಾಷಿಸುವನು. ತನ್ನ ದೇಹವನ್ನು ದಹಿಸಬಹುದೆಂದು ಹೇಳುವನು. ಅಥವಾ ಪರಲೋಕದಲ್ಲಿರುವ ಜೀವರುಗಳು ಸತ್ತಿರುವವನು ಪರಲೋಕಕ್ಕೆ ಬಂದಿರುವನೇ ಅಥವಾ ಇನ್ನೂ ಅವರು ಸ್ಥೂಲದೇಹದಲ್ಲಿಯೇ ನೆಲೆಸಿರುವನೇ ಎಂಬ ವಿಚಾರವನ್ನು ತಿಳಿಸುತ್ತಾರೆ. ಹೀಗೆ ಜೀವಶಾಸ್ತ್ರ ಮಾರ್ಗಗಳಿಂದ ಸತ್ತವನು ತನ್ನ ಸ್ಥೂಲದೇಹವನ್ನು ಬಿಟ್ಟು ಹೋಗಿರುವನೆಂದು ಸ್ಪಷ್ಟವಾಗಿ ತಿಳಿದಮೇಲೆ ಅಂತ್ಯ ಕರ್ಮಗಳನ್ನು ಮಾಡಬೇಕೇ ಹೊರತು ಈಗಿರುವಂತೆ, ಉಸಿರು ನಿಂತರೆ ಸಾಕು, ಸತ್ತಿರುವನೆಂದು ಅವನನು ಸ್ಮಶಾನದಲ್ಲಿ ಸುಟ್ಟಹಾಕುವ ಪದ್ಧತಿಯನ್ನು ತಕ್ಷಣವೆ ನಿಲ್ಲಿಸಬೇಕು. ಇದಲ್ಲದೆ, ಕೆಲವರು ತಮ್ಮ ಆಸ್ತಿಗೇ ವಿಚಾರದಲ್ಲೂ ಇನ್ನೂ ಇತರ ವಿಚಾರಗಳಲ್ಲೂ ತಮ್ಮ ಅಭಿಷ್ಟವನ್ನು ತಿಳಿಸುವುದಕ್ಕವಕಾಶವಿಲ್ಲದೆಯೇ ಸಾಯುವುದರಿಂದ ಅವರು ಸತ್ತಮೇಲೂ ಕೂಡ ತಮ್ಮ ಇಚ್ಛೆಗಳು ಸಫಲವಾಗಲಿಲ್ಲವಲ್ಲಾ ಎಂದು ಕೊರಗುತ್ತಾ ಇರುತ್ತಾರೆ. ಇಂತಹ ಸಂಧರ್ಭಗಳಲ್ಲಿ ಜೀವಶಾಸ್ತ್ರದಿಂದ ಮಹತ್ತರವಾದ ಉಪಕಾರವಾಗುವುದು ಸತ್ತಿರುವವರ ಇಚ್ಛೆಗಳನ್ನೆಲ್ಲಾ ತಿಳಿದು, ಅವುಗಳನ್ನು ಪೂರೈಸುವುದರಿಂದ ಅವರಿಗೆ ಶಾಂತಿಯನ್ನೀಯಹುದು ಈ ವಿಚಾರವು ಶ್ರಾದ್ಧಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದುದು. ಸುಮ್ಮನೆ, ಸತ್ತವರಿಗೆ ಒಳ್ಳೆಯದಾಗಲೆಂದು, ಆಸ್ತಿಪಾಸ್ತಿಗಳನ್ನೂ ಧರ್ಮಛತ್ರಗಳನ್ನೂ ಕಟ್ಟುವುದಕ್ಕಿಂತಲೂ, ಸತ್ತವರ ಅಭಿಲಾಷೆಯನ್ನು ತಿಳಿದು ಅದನ್ನು ಸರವೇರಿಸಿದರೆ, ಅವರಿಗೆ ಹೆಚ್ಚು ತೃಪ್ತಿಯಾಗುತ್ತದೆ. ನ್ಯಾಯತೀರ್ಪಿನ ವಿಚಾರದಲ್ಲೂ ಜೀವಶಾಸ್ತ್ರ ಪ್ರಯೋಜನವು ಅಮೋಘವಾದುದು. ಈಗ ಒಂದು ಖೂನಿಯ ವೊಖದ್ದಮೆಯು ನಡೆಯುತ್ತಿದೆ ಎಂದು ತಿಳಿಯೋಣ. ಜೀವಸಂಭಾಷಣೆಯ ಮೂಲಕ ಖೂನಿಯಾಗಿರುವವನಿಂದ. ಕೂಲೆಪಾತಕನ್ಯಾರೆಂದು ಸುಲಭವಾಗಿ ತಿಳಿಯಬಹುದು. ಬೇಕಾದರೆ ಬೇರೆ ವಿಧದಲ್ಲೂ ಇದರ ನಿಜವನ್ನು ಪರೀಕ್ಷಿಸಬಹುದು. ಹೀಗೆ ಕೂಲೆ ಪಾತಕರನ್ನೂ ಇತರ ತಪ್ಪಿತಸ್ಥರನ್ನೂ ಕಂಡುಹಿಡಿಯುವುದರಲ್ಲಿ ಜೀವಶಾಸ್ತ್ರವು ಮಹತ್ತರವಾದ ಸಹಾಯವನ್ನು ಮಾಡುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ಜೀವಶಾಸ್ತ್ರವು, ನಾವೆಲ್ಲರೂ ಮರಣಹೊಂದಿದ ಮೇಲೆ ಯಾವ ಸ್ಥಿತಿಯನ್ನು ಹೊಂದುತ್ತೇವೆ ಎಂಬ ಅಮೂಲ್ಯ ವಿಚಾರವನ್ನು ಸ್ಪಷ್ಟಗೊಳಿಸುತ್ತದೆ ಮರಣವೆಂಬುದು ಎಲ್ಲರಿಗೂ ಉಂಟಾಗುವ ಸಂಘಟನೆಯು. ಎಂಥವನಾದರೂ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಮುಂದೆ ಒಂದು ದಿವಸವಲ್ಲ ಒಂದು ದಿವಸ ಸಾಯಲೇಬೇಕು. ಸತ್ತಮೇಲೆ ಏನಾಗುವೆವು? ಯಾವ ಸ್ಥಿತಿಯಲಿರುವೆವು? ಎಂಬ ವಿಚಾರದಲ್ಲಿ ಜನ ಸಾಮಾನ್ಯಕ್ಕೆ ಕೇವಲ ಅಜ್ಞಾನವು ಇರುತ್ತದೆ ಈ ಅಜ್ಞಾನವನ್ನು ಹೋಗಲಾಡಿಸುವ ದಿವ್ಯಜ್ಯೋತಿಯಂತಿರುವ ಜೀವಶಾಸ್ತ್ರದ ಬೆಳಕನ್ನು ಪ್ರತಿಮನೆಯಲ್ಲಿಯೂ ಕೂಡಲೇ ಹರಡುವ ಕಾರ್ಯವನ್ನು ಪ್ರತಿಯೊಬ್ಬರೂ ತಮ್ಮ ಕರ್ತವ್ಯವೆಂದು ತಿಳಿಯಬೇಕು. ಯಾವವಿಧದಲ್ಲಿ ನೋಡಿದರೂ. ಜೀವಶಾಸ್ತ್ರದಿಂದ ಉಂಟಾಗುವ ಪ್ರಯೋಜನಗಳು ಅಮೋಘವಾದುದು. ಜಗತ್ತಿನ ದುಃಖಪರಿಹಾರದಲ್ಲೂ, ಪ್ರಿಯಬಾಂಧುಗಳ ಸಂಭಾಷಣೆಯಲ್ಲೂ, ಘೋರವಾದ ಸಜೀವದಹನವನ್ನು ತಪ್ಪಿಸುವ ಪೈಶಾಚ ಕಾರ್ಯವನ್ನು ತಡೆಯುವುದರಲ್ಲೂ, ನಮ್ಮ ಮುಂದಿನ ಸ್ಥಿತಿಯನ್ನು ತಿಳಿಯಪಡಿಸುವುದರಲ್ಲೂ, ಜೀವಶಾಸ್ತ್ರವು ನಮ್ಮ ಜೀವಮಾನವನ್ನೇ ಬೇರ್ಪಡಿಸಿವುದಾಗಿದೆ. ಮನುಷ್ಯ ಜೀವನದ ಮಹಾಸಮಸ್ಯೆಗಳಾದ ಜನನ ಮರಣಗಳ ಮರ್ಮವು ಜೀವಶಾಸ್ತ್ರದಲ್ಲಡಗಿದೆ. ಇಂತಹ ಶಾಸ್ತ್ರ ಪ್ರಚಾರಕ ಸಂಘಗಳೂ ಜೀವಶಾಸ್ತ್ರ ಪರಿಶೋಧನಾ ಸಂಸ್ಥೆಗಳೂ ಕೂಡಲೇ ದೇಶದ ಮೂಲೆ ಮೂಲೆಗಳಲ್ಲೂ ಸ್ಥಾಪಿಸಲ್ಪಡಬೇಕು. ಇದಕ್ಕಾಗಿ, ಧನವಂತರು, ಛತ್ರ, ಆಸ್ಪತ್ರೆ ಮುಂತಾದವುಗಳಿಂದಲೂ ಅಮೋಘವಾದ ಈ ಶಾಸ್ತ್ರ ಪ್ರಚಾರ ಕಾರ್ಯಕ್ಕೆ ಉತ್ತೇಜನೆ ಕೊಡಬೇಕಾದುದು ಅವರ ಪ್ರಥಮ ಕರ್ತವ್ಯವಾಗಿರುತ್ತದೆ. ಹಿಂದೆಯೇ ಹೇಳಿಟ್ಟಂತೆ ಬೊಂಬಾಯಿನ ವಿ. ಡಿ. ಖಷಿ ಎಂಬ ಮಹನೀಯರು ಇಂತಹ ಸಂಸ್ಥೆಗಳನ್ನು ಎಲ್ಲಿ ಬೇಕಾದರೂ ಸ್ಥಾಪಿಸಲು ಕಾತುರರಾಗಿರುವರು. ಜೀವಶಾಸ್ತ್ರ ಸಂಸ್ಥೆಗಳನ್ನು ಪ್ರಾರಂಭಿಸಲು ಇಷ್ಟವುಳ್ಳವರು ಈ ಮಹನೀಯರಿಗೆ ತಿಳಿಸಿದರೇ ಆದರೆ, ಅವರ ಇಷ್ಟವು ಸರವೇರುವುದು ಈ ಮಹನೀಯರ ಪ್ರಜಾಹಿತ ಕಾರ್ಯಕ್ಕೆ ಭಗವಂತನು ಜಯವನ್ನೀಯಲಿ! ಪ್ರಜಾಕೋಟಿಯ ದುಃಖಶಮನ ಕಾರ್ಯಕ್ಕಿಂತಲೂ ಹೆಚ್ಚಾದ ಪರೋಪಕಾರ ಕಾರ್ಯವು ಯಾವುದೂ ಇರುವುದಿಲ್ಲ. ಇಡೀ ಜಗತ್ತಿಗೇ ದಿವ್ಯಜ್ಯೋತಿಯಂತಿರುವ ಜೀವಶಾಸ್ತ್ರದಲ್ಲಿ ವಾಚಕಮಹಾಶಯರ ಶ್ರದ್ಧೆ ಆಸಕ್ತಿಗಳನ್ನು ಎಚ್ಚರಗೊಳಿಸಿದ್ದೇ ಆದರೆ, ಈ ಬರವಣಿಗೆಯು ಸಾರ್ಥಕವಾಗುವಂತಾಗುವುದು ಪ್ರಿಯಬಂಧು ಮರಣದಿಂದ ನರಳುತ್ತಿರುವರಿಗೆ ಶಾಂತಿಯುಂಟಾಗಲಿ! ಲೋಕದ ದುಃಖವು ಉಪಶಮನವಾಗಲಿ!! ಜೀವಶಾಸ್ತ್ರವೆಂಬ ಮಹಾತೇಜಾಂಜ್ವಲ್ಯಮಾನವಾದಜ್ಯೋತಿಯು ಎಲ್ಲೆಲ್ಲೂ ಬೆಳಗಲಿ !!!

ಪರಿಸಮಾಪ್ತಿ.

ಒರಿಸಂಪುರದ ಸಮೀಪದ ಒಂದು ಗ್ರಾಮದಲ್ಲಿ ಮಹಮ್ಮದೀಯ ಯುವಕನೊಬ್ಬನು ಒಬ್ಬ ಹಿಂದೂ ಯುವತಿಯನ್ನು ಕೆಡಿಸಲು ಯತ್ನಿಸಿದ ಸಂಗತಿಯು ಗ್ರಾಮದಲ್ಲಿಯ ಹಿರಿಯರಿಗೆ ತಿಳಿದೊಡನೆಯೇ ಸಭೆಯನ್ನು ಮಾಡಿ ಆ ಯುವಕನಿಗೆ ಪಾದರಕ್ಷಾಪ್ರಯೋಗದಮೂಲಕ ಅವಮಾನಪಡಿಸಿದರೆಂದು ತಿಳಿದುಬಂದಿದೆ.

ಗಮನಿಸಿರಿ ! ತಪ್ಪದೇ ಓದಿರಿ !!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗು
ತ್ತಿರುವ ಜೀವಶಾಸ್ತ್ರದ ವಿಚಾರವಾದ
ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ
ಅಚ್ಚಾಗುತ್ತವೆ.

"ಜೀವಶಾಸ್ತ್ರ ತತ್ವಸಾರ"

ಅಥವಾ

ಸತ್ಯವೆಲ್ಲಿದೆ ?

ಲೇಖಕರು— ಕೆ' ಯವರು.

ಈ ಗ್ರಂಥದ ಮೊದಲನೆಯ ಮುದ್ರಣಕ್ಕೆ ಮಿತ
ವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು
ಹಾಕುವ ಏರ್ಪಾಡುಮಾಡಿದೆ. ಬೇಕಾದವರು ಮೊ
ದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್
ಮಾಡಿಸಬೇಕು. ಅಂತವರಿಗೆ ಗ್ರಂಥವು ಅಚ್ಚಾಗು
ತ್ತಲೇ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ.

ನೊಂದವರೇ ! ಮರುಗುತ್ತಿರುವವರೇ !!
ಇಲ್ಲಿ ಗಮನಿಸಿರಿ !!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು ಎಲ್ಲಿರುವರು ? ಅವರೊಡನೆ ಸಂಭಾಷಿಸಬಹುದೆ ? ಈ ಅಮೋಘವಾದ ವಿಚಾರವನ್ನು ಮೇಲ್ಕಂಡ ಪುಸ್ತಕವನ್ನು ಕರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷವಾದ ದುಃಖಶಮನವನ್ನು ಹೊಂದದೇ ಇರಬೇಡಿ. ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

"ಸತ್ಯವಾದಿ ಆಫೀಸು"
ಚಾಮರಾಜಪುರಂ, ಮೈಸೂರು.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು. ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ತಾಜಕ ಜ್ಯೋತಿಷ್ಕರು,
೧೦೬೮ ಚಾಮರಾಜ ಅಗ್ರಹಾರ, ಮೈಸೂರು

ನೀರಿನಿಂದ!
ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ

H. SASSEN & CO.,
15 Armenian Street, Post Box 163
G. T. MADRAS

S i NAKAYANACH
wkambha, Benares

S.U.N. & CO.
BEN G CITY

ಶಾಸ್ತ್ರಿಗಳೇ ! ಕ
ರು ಆರೋಗ್ಯರೇ ಅಥವ ನ
ವರೇ? ರಾಮಣ್ಣಯ್ಯನವರ ರ್
ಕರ ಆರೋಗ್ಯವೇ ನಿಜವಾದ ೋ
ಗ್ಯ- ಅದಕ್ಕೆ ಕಾರಣವೇನು ರು
ರುದ್ರಾಕ್ಷಿಯನ್ನು ಬಿಡದೆ ಧ ರಾ
ಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಲ?
ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿ
ವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳಾ
ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ
ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿಹೊಂ
ದಿದ ನಮ್ಮ ಕಾಶೀ ಜೌಖಂಭಾ ಶಿರೋಮಣಿ ನಾರಾ
ಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ
ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫ ಮುಖದ ಕಂಠಿಸರ
1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; 100 ರುದ್ರಾಕ್ಷಿ
ಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ ;
ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವ
ರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ
4 ರಿಂದ ರೂ 10 ರವರೆಗೆ ; 9--10--11 ಮುಖಗಳುಳ್ಳ
ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14
ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರೆಗೆ. ಸಣ್ಣ
ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ
ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡ
ದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ
ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ]
1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು :
1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿಸೊ
ಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ .

Subscribe for
&
Advertise in
The
Progressive
MYSORE

ವಿವಿಧ ವಿಷಯಗಳು

ಇಟಲಿಯವರು ಹಾಲಿಂದ ಉಣ್ಣೆಯನ್ನು ತೆಗೆದು ಕಂಬಳಿಗಳನ್ನು ತಯಾರಿಸುತ್ತಿರುವರಂತೆ.

ಇಟಲಿ ಸೈನ್ಯವು ಈಚೆಗೆ ಸೂಡಾನ್ ಪ್ರಾಂತ್ಯವನ್ನು ಪ್ರವೇಶಿಸಿದ್ದಕ್ಕೆ ಎಲ್ಲರೂ ಆಶ್ಚರ್ಯಪಡುತ್ತಿರುವರು.

ಕಾಂಗ್ರೆಸ್ಸಿನ ಮೆಂಬರುಗಳಾಗಲು ಯಾವ ಬಗೆಯ ಚಂದಾವೂ ಇರಕೂಡದೆಂದು ಕೆಲವರು ಅಭಿಪ್ರಾಯಪಡುವರು.

ಲಾರ್ಡ್ ಕ್ಲೈವ್‌ನು ಇಂಡಿಯಾಕ್ಕೆ ಮಾಡಿದ ಮಹೋಪಕಾರವನ್ನು ಕುರಿತು ಜರ್ಮನಿಯಲ್ಲಿ ನಿಸಿಮಾ ಕಂಪನಿಯವರು ಪ್ರದರ್ಶಿಸುತ್ತಿರುವರು.

೨೬,೦೦೦ ಅಡಿ ಎತ್ತರವುಳ್ಳ ಕರಾಕೂರಂ ಶಿಖರವನ್ನು ಆರೋಹಣಮಾಡಲು ಫ್ರಾನ್ಸಿನಿಂದ ಡಿ. ಸಾಗ್ನಿ ಮೊದಲಾದವರು ಇಂಡಿಯಾವಿಗೆ ಬಂದಿರುವರು.

ಜಪಾನ್ ಇಂಡಿಯಾ ಮೇಲೆ ದಂಡಯಾತ್ರೆ ಮಾಡುವದು ನಿಶ್ಚಯವೆಂದೂ ಆದುದರಿಂದ ಯುದ್ಧ ಸನ್ನಾಹಗಳು ಸಂಪೂರ್ಣ ರೀತಿಯಲ್ಲಿ ಆಗಬೇಕೆಂದೂ ಕಲ್ಕತ್ತೆಯ ಸ್ಟೇಟ್ಸ್‌ಮೆನ್ ಪತ್ರಿಕೆಯು ತಿಳಿಸುತ್ತದೆ.

ಜರ್ಮನಿಯ ಇಂಜನೀಯರುಗಳು ರೈಲು ಕಂಬಿ ಇಲ್ಲದೆ ವೇಗವಾಗಿ ನಡೆಯುವ ಇಂಜನ್ನುಗಳನ್ನು ಕಂಡುಹಿಡಿಯುತ್ತಿರುವರಾದ ದರಿಂದ ಬೆಟ್ಟಗಳ ಮೇಲೆ ಅಯಸ್ಕಾಂತವನ್ನಿಟ್ಟು ಇವು ಬೇಗ ಹೋಗುವಂತೆ ಮಾಡುವರಂತೆ.

೫,೦೦೦ ರೂಪಾಯಿಗಳನ್ನು ಸಲ್ಲಿಸಿ ಲೈಸೆನ್ಸ್ ಹೊಂದಿದ್ದಂತೆಯೇ ಇನ್ನು ಮುಂದೆ ಕೊಚ್ಚಿನ್ ಸಂಸ್ಥಾನದಲ್ಲಿ ಪತ್ರಿಕೆಗಳನ್ನು ಪ್ರಚುರಿಸಬಹುದೆಂದು ಶಾಸನ ಮಾಡಿದ್ದಕ್ಕಾಗಿ ಅನೇಕರೂ ದಿವಾನ್ ಸರ್ ಆರ್. ಕೆ. ಷಣ್ಮುಖಶೆಟ್ಟಿಯವರು ಅವರ ಪದವಿಯಲ್ಲಿರಕೂಡದೆಂದು ಗಲಾಟೆಮಾಡಲಾರಂಭಿಸಿರುವರು.

ಫ್ರೆಂಚ್ ಸರಕಾರ್ದಿನ ವೇಳೆ ಜರ್ಮನರ ವಿಮಾನಗಳು ಹಾರಾಡುತ್ತಿವೆ. ಇದಕ್ಕಾಗಿ ಫ್ರೆಂಚರು ಜರ್ಮನಿಗೆ ಎಚ್ಚರಿಕೆಯನ್ನು ಕೊಟ್ಟಿರುವರು.

ಹೌರಾ ಸೇತುವೆಯ ಕಂಟ್ರಾಕ್ಟು ಇಂಡಿಯವನ್ನು ಬಿಟ್ಟು ಹೊರಗೆ ಹೋಗಬಾರದೆಂದು ಕಲ್ಕತ್ತಾ ಕಾರ್ಪೊರೇಶನ್ನಿನವರು ಒಂದು ಠರಾವಿನ ಮೂಲಕ ವ್ಯಕ್ತಪಡಿಸಿರುವರು.

ನಮ್ಮ ಹೊಸ ವೈಸರಾಯರು ಗಾಂಧಿಜಿಯವರೊಡನೆ ಸಂಭಾಷಿಸಲು ಅತುರರಾಗಿದ್ದಾರೆ; ಇಂಡಿಯಾಕ್ಕೆ ಬಂದಮೇಲೆ ಅವರೊಡನೆ ಹೊಸ ಸುಧಾರಣೆ, ಚಕ್ರವರ್ತಿಗಳ ಇಂಡಿಯಾದ ಸುದರ್ಶನಗಳನ್ನು ಕುರಿತು ಮಾತುಕಥೆಗಳಾಗಬಹುದು ; ಎಂದು ಪ್ರಕಟವಾದ ವಾರ್ತೆ ನುಳ್ಳೆಂದು ತಿಯಬಂದಿದೆ.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ಯಸ, ನಿಯಮ, ಭಗವಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತನ್ನ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾರ್ಯಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ — ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪೂಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ

ಶಕ್ತಿಸುಧೆ

ವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಪೂರ್ವ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಜಿನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ಸಾತ್ಕಾಲಿಕ ಉಪಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಜಡಿಪ್ರತಿಗೆ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲತುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುಪ್ರಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದ. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಶಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನ ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅಮೃತಪ್ರಾಯವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಿ. ಖ. ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ,— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 8—4—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಆಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣವಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟಾಂಪಸ್ಸಿಟ್ಟು ವಿಶೇಷ ಮಾಹಿತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya Dacca (Bengal)

ಸಾಧನ ಔಷಧಾಲಯ, ಢಕ್ಕ

ಆಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಷಚಂದ್ರ ಘೋಸು ಎಂ. ಎ. ಎಫ್. ಸಿ ಎಸ್. ಲಂಡನ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ಏನೆಂಬುದನ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನು ನಿವಾರಿಸುತ್ತದೆ. ಸರ್ವಾಂಗ ವಿಶ್ವವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯಿ.

ಸರೀಬಾದಿಸವ—ಪ್ರಮೇಹ. ಸರ್ವಾಯಿ ರೋಗಗಳಿಗೆ ಅಮೋಘ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೫ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧನಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ, ಮತ್ತು ೫೦ ಹೊತ್ತಿಗೆ ೫ ರೂ.

H. S- KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

fOr

Best Unani Medicines